# ಮಾಗಡಿಯ 'ಕಲ್ಯ'ದ ಸಾಂಸ್ಕೃತಿಕ ಪರಂಪರೆ

**ಕೆ, ಸಿ ರಮೇಶ**
ಕಂಬೇಗೌಡನಪಾಳ್ಯ, ಮರಿಕುಪ್ಪೆ ಅಂಚೆ, ಸೋಲೂರು ಹೋಬಳಿ
ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ

**ಡಾ. ಜ್ಯೋತಿ ಶಂಕರ್ ಸಹಾಯಕ ಪ್ರಾಧ್ಯಾಪಕರು**
ಕನ್ನಡ ಸಂಶೋಧನಾ ವಿಭಾಗ
ಮುಕ್ತ ಗಂಗೋತ್ರಿ, ಮೈಸೂರು ಮುಕ್ತ ವಿಶ್ವವಿದ್ಯಾನಿಲಯ

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
ರಮ◌ೇಶಕೆಸಿ, and ಪರಾಧ್ಯಾಪಕರುಡಾ ಜಯ◌ೋತಿ ಶಂಕರ ಸಹಾಯಕ. "ಮಾಗಡಿಯ 'ಕಲಯ'ದ ಸಾಂಸಕೃತಿಕ ಪರಂಪರ." *Shanlax International Journal of Arts, Science and Humanities,* vol. 12, no. S1, 2024, pp. 227–29.

DOI:
https://doi.org/10.34293/sijash.v12iS1-Oct.8310

ಪ್ರಾಚೀನ ಕರ್ನಾಟಕದಲ್ಲಿ ಕೆಲವು ಪ್ರದೇಶಗಳು ಸಾಂಸ್ಕೃತಿಕ ಪರಂಪರೆಯ ತಾಣಗಳು ಎಂಬ ಮನ್ನಣೆಗೆ ಪಾತ್ರವಾಗಿವೆ. ಪ್ರಾಚೀನ ದಕ್ಷಿಣ ಕರ್ನಾಟಕದಲ್ಲಿ ನೋಡಿದಾಗ ನಮಗೆ ಬಹಳ ಮುಖ್ಯವಾಗಿ ಕಂಡುಬರುವಂತಹದ್ದು ರಾಮನಗರ ಜಿಲ್ಲೆಯಲ್ಲಿರುವ ಮಾಗಡಿಯ 'ಕಲ್ಯ' ಅಥವಾ ಕಲಾವತಿ ನಗರ. ಪ್ರಾಚೀನ ಕರ್ನಾಟಕದಲ್ಲಿ ಶ್ರವಣಬೆಳಗೊಳವನ್ನು ಹೊರತು ಪಡಿಸಿದರೆ ನಮಗೆ ಬಹಳ ಮುಖ್ಯವಾಗಿ ಸಾಂಸ್ಕೃತಿಕ ಕೇಂದ್ರವಾಗಿ ನಮ್ಮ ಮುಂದೆ ಕಾಣ ಸಿಗುವುದೇ ಕಲ್ಯ ಅಥವಾ ಕಲಾವತಿ ನಗರ. ಇಂದಿನ ಈ ಪ್ರದೇಶ ಶತಮಾನಗಳಷ್ಟು ಪ್ರಾಚೀನವಾಗಿದ್ದು ಅನೇಕ ಇತಿಹಾಸವನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿದೆ. ಈ ಪ್ರದೇಶದಲ್ಲಿ 2500 ವರ್ಷಗಳ ಹಿಂದೆಯೇ ಜನವಸತಿ ಇತ್ತು ಎಂಬುದಕ್ಕೆ ಅನೇಕ ಸಾಕ್ಷಾಧರಗಳು ನಮಗೆ ದೊರೆಯುವುದರಿಂದ ಅಂದಿನಿಂದ ಇಂದಿನವರೆಗೂ ಇದು ಸಂಶೋಧನೆ ತಾಣವಾಗಿಯೇ ಉಳಿದಿದೆ.

ಕಲ್ಯ ಪ್ರದೇಶವು ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯಲ್ಲಿ ಅಜರಾಮರವಾಗಿರುವಂತಹ ಹೊಸ ಹೊಸ ಇತಿಹಾಸದ ವಿಚಾರಗಳು ನಮಗೆ ದೊರೆಯುತ್ತಿವೆ. ಸಂಶೋಧನೆಗೆ ಒಳಪಡಿಸಿದಂತೆಲ್ಲಾ ಹೊಸ ವಿಚಾರಗಳ ತಾಣವಾಗಿ ನಮಗೆ ಕಲ್ಯ ಪ್ರದೇಶ ಸಿಗುತ್ತದೆ. ಕಲ್ಯದಲ್ಲಿ ಇತಿಹಾಸ ಪೂರ್ವಕಾಲದ ಗುಹಾವಾಸಿ ಮಾನವರು ಬರೆದ ಭಿತ್ತಿಚಿತ್ರಗಳು ಮತ್ತು ನವಶಿಲಾಯುಗದ ಕಾಲದ ಕಲ್ಲಿನ ಕೊಡಲಿಗಳು ಕಲ್ಯ ಪ್ರದೇಶದಲ್ಲಿ ದೊರೆತಿವೆ1 .ಕಲ್ಯವು ಪ್ರಾಚೀನ ಕಾಲದಿಂದಲೂ ಜನವಸತಿ ಕೇಂದ್ರವಾಗಿತ್ತು ಎಂಬುದು ನಮಗೆ ಸ್ಪಷ್ಟವಾಗುತ್ತದೆ. ಕಲ್ಯದ ಬೆಟ್ಟಗಳಲ್ಲಿರುವ ಗುಹೆಗಳು ಪ್ರಚೀನ ಜನರ ವಾಸಸ್ಥಳಗಳಾಗಿದ್ದವು.ಇವೇ ಗುಹೆಗಳು ಮುಂದೆ ಬೌದ್ಧರ ಯತಿಗಳ ಆಶ್ರಯತಾಣಗಳಾಗಿದ್ದವು2. ಕರ್ನಾಟಕದಲ್ಲಿನ ಬೌದ್ಧ ಧರ್ಮದ ಬಗ್ಗೆ ಕೊನೆ ದಾಖಲೆ ಸಿಗುವುದು ಮಾಗಡಿಯ ಕಲ್ಯದಲ್ಲೇ ಆಗಿದೆ. ತುರುವೇಕೆರೆಯ ಕ್ರಿ.ಶ 1533ರ ತಾಮ್ರಪಟ ಶಾಸನದ ಮೂಲಕ ಇಂದಿನ 'ಕಲ್ಯ' ಅಂದಿನ ಕಲಾವತಿ ನಗರದ ಬಗ್ಗೆ ಉಲ್ಲೇಖ ಮಾಡುತ್ತದೆ.

> ಅಷ್ಟಾದಶೈತಾ ವೃತ್ತೀನಾಂ ಕೃತ್ವಾ ರಾಜಾತಿಧಾರ್ಮಿಕಃ।
> ಅವಸನ್ನಗರೀಮೇನಾಮ್ ನಳಿನಾವತಿ ಸಂಜ್ಞಿತಾಮ್ ।
> ತಸ್ಯಾಶ್ಚ ಪೂರ್ವದಿಗ್ಭಾಗೇ ಭೈರವಾದ್ರಿರಿತಿ ಸ್ಥಿತಃ ।
> ತಸ್ಯಾದ್ರೇರ್ದಕ್ಷಣೇ ಭಾಗೇ ನಾಮ್ನಾ ತ್ರೇಲಿಂಗನಪಾಲಕಾ ಶ್ರೀನಿವಾಸಪುರೀ ಚೇತಿ ಪ್ರತಿನಾಮ್ನಾ
> ಚ ವಿಶ್ರುತಾ ।
> ತಸ್ಯಾಸ್ತು ಪೂರ್ವದಿಗ್ಭಾಗೇ ಹೂಜಿಗಲ್ಲುರಿತಿ ಸ್ಥಿತಃ ।
> ತಸ್ಯಾಶ್ಚಾಗ್ನೇಯ ದಿಗ್ಭಾಗೇ ಬೌದ್ಧವಾಸಾ ಮಹಾಪುರೀ ಕಲವತೀತಿ ವಿಖ್ಯಾತಾ।
> ತೂತ್ತರೇ ಹರಿಣಾಟವೀ। 3

ಅಚ್ಯುತರಾಯನು ಪೆನುಗೊಂಡೆಯಿಂದ ರಾಜ್ಯಭಾರ ಮಾಡುವ ವೇಳೆ 'ನಳಿನಾವತಿಯ' ಊರಿನ ಬಗ್ಗೆ ಶಾಸನದಲ್ಲಿ ಸಿಗುತ್ತದೆ. ಈ ನಳಿನಾವತಿಯೇ ಇಂದಿನ ಕಲ್ಯ ಎಂದು ಡಾ, ಚಿದಾನಂದ ಮೂರ್ತಿಯವರು ಪತ್ತೆ ಹಚ್ಚಿದ್ದಾರೆ4. ಬೌದ್ಧ ಧರ್ಮದ ಬಗ್ಗೆ ಕೊನೆ ಉಲ್ಲೇಖವಿರುವ ಇದೇ ತಾಮ್ರ ಶಾಸನದಲ್ಲಿ 'ಬೌದ್ಧವಾಸಾ ಮಹಾಪುರೀ ಕಲವತೀತಿ' 5

ಉಲ್ಲೇಖವು ಕಲ್ಯ ಅಥವಾ ಕಲಾವತಿ ನಗರವು ಬೌದ್ಧರ ವಸತಿಯ ಕೇಂದ್ರವಾಗಿತ್ತು ಎಂದು ಸ್ಪಷ್ಟವಾಗಿ ತಿಳಿಸುತ್ತದೆ. ಇದಕ್ಕೆ ಮತ್ತಷ್ಟು ಪುಷ್ಠಿಯಾಗಿ ಇದೇ ಶಾಸನದಲ್ಲಿ 'ಹರಿಣಾಟವೀ' 6 ಕಲಾವತಿ ನಗರದ ಉತ್ತರಕ್ಕಿದೆ ಎಂಬ ಉಲ್ಲೇಖವಿದೆ. ಕಲ್ಯದಿಂದ ಸುಮಾರು 8 ಕಿಲೋ ಮೀಟರ್ ದೂರುದಲ್ಲಿ ಹುಲ್ಲೇನ ಹಳ್ಳಿ ಎಂಬ ಊರು ಇದೆ. (ಹುಲ್ಲೆ ಎಂದರೆ ಜಿಂಕೆ) ಬೌದ್ಧರಿಗೆ ಜಿಂಕೆಗಳ ವನ ಎಂದರೆ ಬಹಳ ಪ್ರಿಯ. ಪ್ರಮುಖ ಬೌದ್ಧ ಕೇಂದ್ರಗಳ ಪಕ್ಕದಲ್ಲಿ ಈ ಜಿಂಕೆವನಗಳು ಇರುತ್ತಿದ್ದವು7. ಇದೆಲ್ಲವನ್ನೂ ಗಮನಿಸಿದಾಗ ಮಾಗಡಿಯ ಕಲ್ಯ ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದ ಬೌದ್ಧ ಕೇಂದ್ರವಾಗಿತ್ತು ಎಂಬುದು ಸ್ಪಷ್ಟ. ಬೌದ್ಧ ಧರ್ಮದ ಬಗ್ಗೆ ಅರ್ವಾಚಿನವಾಗಿ ದಾಖಲೆ ಸಿಗೋದು ಮಾಗಡಿಯ ಕಲ್ಯವೇ ಆಗಿರುವುದರಿಂದ ಬೌದ್ಧರ ನೆಲೆವೀಡು ಮಾಗಡಿಯ ಕಲ್ಯವಾಗಿತ್ತು ಎಂಬುದು ತಿಳಿಯಬಹುದು. ಕ್ರಿಪೂ ಮೂರನೇ ಶತಮಾನದಿಂದ ಕ್ರಿ. ಶ 16 ನೇ ಶತಮಾನದ ವರೆಗೂ ಕರ್ನಾಟಕದಲ್ಲಿ ಬೌದ್ಧಧರ್ಮ ಪ್ರಚಲಿತದಲ್ಲಿತ್ತು ಎಂಬುದಕ್ಕೆ ನಮಗೆ ಕಲ್ಯ ಪ್ರದೇಶವು ದಾಖಲೆಯಾಗಿದೆ.

ಕಲಾವತಿ ನಗರದಲ್ಲಿ ಬೌದ್ಧ ಧರ್ಮದ ಪ್ರಭಾವ ಕಡಿಮೆ ಆಗುತ್ತಿದ್ದಂತೆ ಜೈನ ಧರ್ಮ ಮೇಲ್ಮುಖದ ಕಡೆ ಸಾಗಿತ್ತು. ಮಾಗಡಿ ತಾಲೂಕಿನ ಕಲ್ಯ ಗ್ರಾಮವು ಪ್ರಾಚೀನ ಕರ್ನಾಟಕದಲ್ಲಿ (12 ನೇ ಶತಮಾನ) ಒಂದು ಪ್ರಮುಖ ಜೈನ ಕೇಂದ್ರವಾಗಿತ್ತು. ಕಲ್ಯದ ಹೂಜಿಗಲ್ಲಿನ ಗುಡ್ಡದ ತಳಭಾಗದಲ್ಲಿ 15ಕ್ಕೂ ಹೆಚ್ಚು ಜಿನ ವಿಗ್ರಹಗಳು, ಹಾಗೂ ಒಂದೇ ಕಡೆ 21 ನಿಸಿದಿ ಶಾಸನಗಳು ದೊರೆಯುತ್ತವೆ8. (11 ನಿಸದಿ ಶಾಸನಗಳು, ಮತ್ತು 8 ಶಾಸನ ರಹಿತ ನಿಸದಿಗಳು ಸೇರಿದಂತೆ ಒಟ್ಟು 21 ಶಾಸನಗಳು ದೊರೆತಿವೆ) ಜೈನರು ತಮ್ಮ ಅಂತ್ಯಕಾಲದಲ್ಲಿ ಸಲ್ಲೇಖನ ವ್ರತದ ಮೂಲಕ ತನ್ನ ದೇಹವನ್ನು ತ್ಯಾಗ ಮಾಡಿದ ನಂತರ ಆ ಸ್ಥಳದಲ್ಲಿ ಶಾಸನಗಳನ್ನು ಹಾಕಿಸುತ್ತಿದ್ದರು. ಹೂಜಿಗಲ್ಲಿನ ಹೊರವಲಯದಲ್ಲಿರುವ ಮುತ್ತರಾಯನಗುಡ್ಡ ಹಾಗೂ ಕಂಭದ ಅರೆಗಲ್ಲು ಎಂಬ ಗುಡ್ಡದಲ್ಲಿ ಬೃಹದಾಕಾರದ ನಿಸದಿ ಕಲ್ಲುಗಳು ನಮಗೆ ಕಂಡುಬಂದಿವೆ. ಹೂಜಿಗಲ್ಲು ಗ್ರಾಮದ ಉತ್ತರಕ್ಕೆ ಬಸವನ ಬೆಟ್ಟದ ಕಟ್ಟೆಯ ಕೆಳಗೆ ಇರುವ ಶಾಸನವೊಂದು

.ದನಸಂವತ್ಸರದ..
ಬಲುಚಂದ್ರಸೇನ..ರಿ
ಗಳಗುಡ್ಡಮಾಯಪನ
ನಿಸಿದ್ಧಿ 9

ತಾರಣಸಂವತ್ಸರ
ಮಾರ್ಗಶಿರುಕು.ಲು
ಚಂದ್ರಸೇನಸೂರಿಗಳಗು
ಡ್ಡ ...ನಿಶಿದ್ಧಿ 10

ಇಷ್ಟೊಂದು ಪ್ರಮಾಣದಲ್ಲಿ ನಿಸದಿ ಶಾಸನಗಳು ನಮಗೆ ದೊರೆತಿರುವುದರಿಂದ ಮಾಗಡಿ ತಾಲೂಕಿನಲ್ಲಿ ಜೈನ ಧರ್ಮ ಎಷ್ಟು ಪ್ರಬಲವಾಗಿತ್ತು ಎಂಬುದನ್ನು ಮನಗಾಣಬಹುದು. ಕಲ್ಯದ ಹೂಜಿಗಲ್ಲಿನಲ್ಲಿ 21ಕ್ಕೂ ಹೆಚ್ಚು ಒಂದೇ ಕಡೆ ನಿಸದಿ ಶಾಸನಗಳು ಸಿಕ್ಕಿರುವುದು ಬಹಳ ಗಮನಾರ್ಹವಾದ ಅಂಶವಾಗಿದೆ. ಶ್ರವಣಬೆಳಗೊಳ, ಮತ್ತು ಕೊಪ್ಪಳವನ್ನು ಹೊರತು ಪಡಿಸಿದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜೈನ ಶಾಸನಗಳು ದೊರೆತಿರುವುದು ಕಲ್ಯದ ಹೂಜಿಗಲ್ಲಿನಲ್ಲಿ. ಕಲ್ಯ ಊರಿನ ಹೊರಭಾಗದಲ್ಲಿ ಮಾನಸ್ತಂಭ ಮತ್ತು ಮುಕ್ಕೊಡೆ ಶಿಲ್ಪಗಳು ದೊರೆತಿವೆ. ಶಾಸನವಿರುವ ಪಾರ್ಶ್ವನಾಥನ ವಿಗ್ರಹ, ಜಿನ ವಿಗ್ರಹ ಇಷ್ಟು ನಮಗೆ ಕಲ್ಯದಲ್ಲಿ ಜೈನ ಧರ್ಮದ ಪ್ರಾಬಲ್ಯ ಎಷ್ಟಿತ್ತು ಎಂಬುದು ನಮಗೆ ತಿಳಿಯುತ್ತದೆ.

ಕಲ್ಯ ಪ್ರದೇಶ ವೈಷ್ಣವ ಪ್ರಮುಖ ಕೇಂದ್ರವಾಗಿತ್ತು, ಜೈನರು ಮತ್ತು ವೈಷ್ಣವರ ಧಾರ್ಮಿಕ ಕಿತ್ತಾಟವನ್ನು ತಿಳಿಸುವ ಬಹಳ ಮುಖ್ಯವಾದ ಕ್ರಿ. ಶ. 1368 ಕಲ್ಯಾದ ಬುಕ್ಕರಾಯನ ಶಾಸನ ವೈಷ್ಣವರ ಪ್ರಾಬಲ್ಯವನ್ನು ಸಾರುತ್ತದೆ. ಇದರೊಂದಿಗೆ ಜೈನರ ನಡುವಿನ ಅವರ ಧಾರ್ಮಿಕ ಸಂಘರ್ಷವನ್ನು ಇತಿಹಾಸಕ್ಕೆ ಮನದಟ್ಟುಮಾಡಿಕೊಡುತ್ತದೆ. ಈ ಎರಡು ಧರ್ಮೀಯರ ಜಗಳದಿಂದಾಗಿ ಕಲ್ಯದ ಅನೇಕ ಬಸದಿಗಳು, ದೇವಾಲಯಗಳು ನಾಶವಾಗಿರುವ ಅವಶೇಷಗಳನ್ನು ಈಗಲೂ ಕಾಣಬಹುದಾಗಿದೆ. ಈ ಧಾರ್ಮೀಕ ಜಗಳವನ್ನು ಬುಕ್ಕರಾಯ ನೀಡಿದ ತೀರ್ಪು ನಿಜಕ್ಕೂ ಕಲ್ಯಕ್ಕೆ ಮಾತ್ರವಾಗಿರದೆ ಇಡೀ ನಾಡಿಗೆ ನೀಡಿದ ಸಂದೇಶವಾಗಿದೆ. ಈ ಬುಕ್ಕರಾಯನ ತೀರ್ಪನ್ನು ಡಾ, ಎಂ ಚಿದಾನಂದ ಮೂರ್ತಿಯವರು 3ನೇ ಶತಮಾನದ ಅಶೋಕನ 'ಧಮ್ಮಲಿಪಿ'ಯನ್ನು ನೆನಪಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕಲ್ಯಾದಲ್ಲಿ 13 ನೇ ಶತಮಾನದ ಶಾಸನವಿರುವ ಭಗ್ನ ಪಾರ್ಶ್ವನಾಥನ ವಿಗ್ರಹವಿದೆ.( ಸದ್ಯ ಈ ವಿಗ್ರಹ ರಾಮನಗರದಲ್ಲಿರು ಜಾನಪದ ಲೋಕದ ವಸ್ತು ಸಂಗ್ರಹಾಲಯದಲ್ಲಿದೆ) ಈಗಲೂ ಗ್ರಾಮದಲ್ಲಿ 'ಬಸದಿಗುಂಡಿ' ಎಂದು ಕರೆಯವ ಸ್ಥಳವಿದೆ. ಈ ಜಾಗದಲ್ಲಿ ಈ ಹಿಂದೆ ಅನೇಕ ಬಸದಿಗಳು ಇದ್ದಿರಬಹುದು. ಇದೀಗ ಅವೆಲ್ಲವುಗಳೂ ನಾಶವಾಗಿವೆ.

ಕಲ್ಯಾದಲ್ಲಿ ಜೈನರಿಗೂ ಮತ್ತು ವೈಷ್ಣವರಿಗೂ ಜಗಳವಾದಾಗ ಎರಡೂ ಧರ್ಮದ ಅನೇಕ ದೇವಾಲಯಗಳು ನಾಶವಾಗಿವೆ. ಈವೇಳೆ ಕಲ್ಯಾದಲ್ಲಿದ್ದ ವೈಷ್ಣವ ದೇವಾಲಯದವೊಂದು ನಾಶವಾದಾಗ ಅಲ್ಲಿದ್ದಂತಹ ರಂಗನಾಥ ಸ್ವಾಮಿ ವಿಗ್ರಹವನ್ನು ಮಾಗಡಿಗೆ ತೆಗೆದುಕೊಂಡು ಹೋಗಿರಬಹುದು. ಮಾಗಡಿಯ ರಂಗನಾಥ ಸ್ವಾಮಿಯ ಮೂಲ ವಿಗ್ರಹ ಕಲ್ಯಾದ ವೈಷ್ಣವ ದೇವಾಲಯದಲ್ಲಿತ್ತು ಎಂಬ ನಂಬಿಕೆ ಈಗಲೂ ಇದೆ.11 ಮಾಗಡಿಯ ರಂಗನಾಥಸ್ವಾಮಿ ದೇವಾಲಯದ ರಥೋತ್ಸವದಲ್ಲಿ ದೇವರ ಪ್ರಸಾದದ ಮೊದಲ ಪಾಲನ್ನು ಈಗಲೂ ಕಲ್ಯದ ವೈಷ್ಣವ ಜನರಿಗೆ ಮೀಸಲಿಡುತ್ತಾರೆ12.

ಕಲ್ಯ ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿ ಅಧಿಕ ಭೈರವ ಪಂಥವು ಇತ್ತು ಎಂಬುದಕ್ಕೆ ನಮಗೆ ಅನೇಕ ಸಾಕ್ಷ್ಯಾಧಾರಗಳು ದೊರೆಯುತ್ತವೆ. ಕಲ್ಯದ ಹೊರವಲಯದಲ್ಲಿರುವ ಗುಡ್ಡದ ಮೇಲೆ ಭೈರವ ಚಿತ್ರವೊಂದು ಕಾಣಸಿಗುತ್ತದೆ. ಕಲ್ಯಾದ ಉತ್ತರಕ್ಕಿರುವ ಹುಲ್ಲೇನಹಳ್ಳಿಯಲ್ಲಿ ಭೈರವರನ ದೇವಾಲಯಗಳಿದ್ದು ಇಂದಿಗೂ ಪೂಜಾ ಕೈಂಕರ್ಯಗಳು ನಡೆಯುವುದನ್ನು ಕಾಣಬಹುದಾಗಿದೆ.

ಮಾಗಡಿಯ ಕಲ್ಯವು ವೀರಶೈವ ಕೇಂದ್ರವೂ ಆಗಿತ್ತು. ಕಲ್ಯಾದ ಹೊರಹೊಲದಲ್ಲಿರುವ ಬೆಟ್ಟದ ಮೇಲೆ ತೆಲುಗಿನ ಮಹಾಕವಿ ಪಾಲ್ಕುರಿಕೆ ಸೋಮನಾಥನ ಸಮಾಧಿಯೂ ಇದೆ. ಈತ ನಿಷ್ಠಾವಂತ ವೀರಶೈವನಾಗಿದ್ದನು. ಈತನ ಬದುಕಿನ ಕಾಲಾವಧಿಯಲ್ಲಿಯೇ ಇದ್ದಂತಹ ಸರ್ವಶೀಲೆ ಚೆನ್ನಮ್ಮ ಆಚರಣೆ ಮಾಡುತ್ತಿದ್ದ 64 ಶೀಲಾಚರಣೆಗಳಿಂದ ಪ್ರಭಾವಿತನಾಗಿ ಈಕೆಯನ್ನು ನೋಡಲು ಇಂದಿನ ಆಂಧ್ರದ ನಲ್ಗೊಂಡ ಜಿಲ್ಲೆಯ ಪಾಲ್ಕುರಿಕೆಯಿಂದ ಯಾರಿಗೂ ಕಾಣದಂತೆ ಕಲ್ಯಾಕ್ಕೆ ಆಗಮಿಸಿ ಇಲ್ಲಿಯೇ ಇಡೀ ಬದುಕು ಕಳೆದು ಇಲ್ಲಿಯೇ ಸಾವನಪ್ಪಿದ್ದಾನೆ. ಈತನ ಸಮಾಧಿ ಕಲ್ಯಾದ ಕಲ್ಲೇಶ್ವರ ದೇವಾಲಯದ ಮುಂಭಾಗದಲ್ಲಿಯೇ ಇದೆ. ಈತನ ಸಮಾಧಿ ಪಕ್ಕದಲ್ಲಿಯೇ ಚೆನ್ನಮ್ಮನ ಸಮಾಧಿಯೂ ಇರುವುದನ್ನು ಇಂದಿಗೂ ಕಾಣಬಹುದಾಗಿದೆ. 13 ನೇ ಶತಮಾದ ವೇಳೆಯಲ್ಲಿ ಕಲ್ಯಾದ ಕಲ್ಲೇಶ್ವರ ಬೆಟ್ಟಕ್ಕೆ ವೀರಶೈವರನ್ನು ಹೊರತು ಪಡಿಸಿ ಯಾರೂ ಹತ್ತಲು ಅವಕಾಶವಿರಲಿಲ್ಲ13. ಅಷ್ಟು ಕಠಿಣವಾಗಿ ಇಲ್ಲಿ ವೀರಶೈವ ಧರ್ಮವನ್ನು ಇಲ್ಲಿನ ಜನರು ಅನುಸರಿಸುತ್ತಿದ್ದರು. ಇಂದಿಗೂ ಕೂಡ ಪಾಲ್ಕುರಿಕೆ ಸೋಮನಾಥ ವಾಸ ಮಾಡುತ್ತಿದ್ದ ಮಂಟಪ 13 ನೇ ಶತಮಾನದಲ್ಲಿ ಇದ್ದ ರೀತಿಯೇ ಇಂದಿಗೂ ಇದೆ. ಮಂಟಪ ಬದಲಾವಣೆ ಆಗದೆ ಹಲವು ಶತಮಾನಗಳಿಂದ ಹಾಗೆ ಉಳಿದುಕೊಂಡು ಬಂದಿದೆ. ಪಾಲ್ಕುರಿಕೆ ಸೋಮನಾಥ ತೆಲುಗಿನಲ್ಲಿ ಬಸವಣ್ಣನ ಬಗ್ಗೆ ಬರೆದಂತಹ 'ಬಸವಪುರಾಣಮು' ಎಂಬುದನ್ನು ಭೀಮಕವಿ ಬಸವಪುರಾಣ ಎಂಬುದಾಗಿ ಕನ್ನಡದಲ್ಲಿ ರಚನೆ ಮಾಡಿದನು. ಇದರಿಂದ ಬಸವಣ್ಣನವರನ್ನು ಕನ್ನಡಕ್ಕೆ ಪರಿಚಯ ಮಾಡಿಕೊಟ್ಟ ಮೊದಲ ಕೃತಿ. ಹೀಗಾಗಿ ಕಲ್ಯವೂ ಬೌದ್ಧ, ಜೈನ, ವೀರಶೈವ ಮೂರು ಧರ್ಮಗಳ ಕೇಂದ್ರದ ಜೊತೆಗೆ ಒಂದು ಸಾಹಿತ್ಯಕ ಕೇಂದ್ರವೂ ಆಗಿತ್ತು.

ಕಲ್ಯವೂ ಬಹುದೊಡ್ಡ ವ್ಯಾಪಾರ ಕೇಂದ್ರವೂ ಆಗಿದ್ದರಲ್ಲಿ ಅನುಮಾನವೇ ಇಲ್ಲ ಜೈನನಾದ ಬುಸವಿ ಶೆಟ್ಟಿ, ದೇವಿ ಶೆಟ್ಟಿ ಎಂಬ ವರ್ತಕರ ಹೆಸರುಗಳು ನಮಗೆ ಶಾಸನಗಳಲ್ಲೇ ದೊರೆಯುವುದರಿಂದ ವೀರಶೈವರಲ್ಲಿ ಕೇತಿ ಶೆಟ್ಟಿ ಎಂಬ ವರ್ತನಕನ ಹೆಸರು ಸಾಹಿತ್ಯ ಕೃತಿಯಿಂದ ತಿಳಿಯುತ್ತದೆ. ಕಲ್ಯ ವ್ಯಾಪಾರ ಕೇಂದ್ರವನ್ನು ನೋಡಿಕೊಳ್ಳಲು ಬುಕ್ಕರಾಯನು ಒಬ್ಬ ಅಧಿಕಾರಿಯನ್ನು ನೇಮಿಸಿದ್ದನು. ಈ ಬಗ್ಗೆ ಕ್ರಿ. ಶ 1386 ರ ಶಾಸನವು ತಿಳಿಸುತ್ತದೆ. ಹೀಗಾಗಿ ಕಲ್ಯಾ ಪ್ರದೇಶ ಬಹುದೊಡ್ಡ ವ್ಯಾಪಾರ ಕೇಂದ್ರವಾಗಿತ್ತು ಎಂದು ಹೇಳಬಹುದು. ಜೈನನಾದ ಬುಸವಿಸೆಟ್ಟಿ ಜೈನರ ನಾಯಕನಾಗಿದ್ದನು.ಕಲ್ಯದ ಜೈನರಿಗೂ ವೈಷ್ಣವರಿಗೂ ಜಗಳವಾದಾಗ ಜೈನರ ನಿಯೋಗಕ್ಕೆ ನಾಯಕನಾಗಿ ವಿಜಯನಗರದ ಬುಕ್ಕರಾಯನಬಳಿ ಈ ಬುಸವಿಸೆಟ್ಟಿ ಹೋಗಿದ್ದನು ಎಂಬುದು ನಮಗೆ ಶಾಸನಗಳಿಂದ ತಿಳಿಯುತ್ತದೆ.

ಮಧ್ಯಕಾಲದ ವೇಳೆಗೆ ಕಲ್ಯ ಪ್ರದೇಶವು ಸರ್ವಧರ್ಮ ಸಮನ್ವಯದ ಕೇಂದ್ರವಾಗಿತ್ತು. ಬೌದ್ಧರು, ಜೈನರು, ವೈಷ್ಣವರು, ಶೈವರು, ವೀರಶೈವರು ಮತ್ತು ಇತರೆ ಧರ್ಮದವರು ಈ ಪ್ರದೇಶದಲ್ಲಿ ಸಹಬಾಳ್ವೆ ನಡೆಸಿ ಇಡೀ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಿ ಹೋಗಿದ್ದಾರೆ. ಇದು ಇಡೀ ಮಾನವ ಕುಲಕ್ಕೆ ಒಂದು ಮಾದರಿ ಪ್ರದೇಶವಾಗಿತ್ತು,

**ಕೊನೆ ಟಿಪ್ಪಣಿ**

1. ಡಾ. ಎಂ ಚಿದಾನಂದ ಮೂರ್ತಿ: ಹೊಸತು ಹೊಸತು, ಸಪ್ನ ಬುಕ್ ಹೌಸ್ 2001, ಪುಟ 222
2. ಡಾ. ಎಂ ಚಿದಾನಂದ ಮೂರ್ತಿ: ಹೊಸತು ಹೊಸತು, ಸಪ್ನ ಬುಕ್ ಹೌಸ್ 2001, ಪುಟ 222
3. ಬಿ.ಎಲ್.ರೈಸ್.(ಸಂ)ಎಪಿಗ್ರಾಫಿಯಾ ಕರ್ನಾಟಿಕ. ಸಂಪುಟ ಫಿಟಟ. ತಿಪಟೂರು1
4. ಡಾ. ಎಂ ಚಿದಾನಂದ ಮೂರ್ತಿ: ಹೊಸತು ಹೊಸತು, ಸಪ್ನ ಬುಕ್ ಹೌಸ್ 2001, ಪುಟ 220
5. ಬಿ.ಎಲ್.ರೈಸ್.(ಸಂ)ಎಪಿಗ್ರಾಫಿಯಾ ಕರ್ನಾಟಿಕ. ಸಂಪುಟ ಫಿಟಟ. ತಿಪಟೂರು1
6. ಬಿ.ಎಲ್.ರೈಸ್.(ಸಂ)ಎಪಿಗ್ರಾಫಿಯಾ ಕರ್ನಾಟಿಕ. ಸಂಪುಟ ಫಿಟಟ. ತಿಪಟೂರು1
7. ಡಾ. ಎಂ ಚಿದಾನಂದ ಮೂರ್ತಿ: ಹೊಸತು ಹೊಸತು, ಸಪ್ನ ಬುಕ್ ಹೌಸ್ 2001, ಪುಟ 221
8. ಡಾ. ಎಂ.ಜಿ ಮಂಜುನಾಥ: ಶಾಸನ ಪರಿಶೋಧನೆ ಪು.168
9. ಬಿ. ಎಲ್ ರೈಸ್ (ಸಂ)– ಎಫಿಗ್ರಫಿಯ ಕರ್ನಾಟಿಕ ಶಾಸನ ಸಂಪುಟ ಖಫ಼ಿ , 1903. ಪು 11510.
10. ಬಿ. ಎಲ್ ರೈಸ್ (ಸಂ)– ಎಫಿಗ್ರಫಿಯ ಕರ್ನಾಟಿಕ ಶಾಸನ ಸಂಪುಟ ಖಫ಼ಿ, 1903. ಪು 115
11. ಡಾ. ಎಂ ಚಿದಾನಂದ ಮೂರ್ತಿ: ಹೊಸತು ಹೊಸತು, ಸಪ್ನ ಬುಕ್ ಹೌಸ್ 2001, ಪುಟ 223
12. ಡಾ. ಎಂ. ಚಿದಾನಂದ ಮೂರ್ತಿ: ಸಂಪ್ರಬಂಧ ಸಂಚಯ, ಸಪ್ನ ಬುಕ್ ಹೌಸ್ ಪ್ರೈ.ಲಿ. 2013, ಪುಟ 206
13. ಡಾ. ಎಂ. ಚಿದಾನಂದ ಮೂರ್ತಿ: ಸಂಪ್ರಬಂಧ ಸಂಚಯ, ಸಪ್ನ ಬುಕ್ ಹೌಸ್ ಪ್ರೈ.ಲಿ. 2013, ಪುಟ 207